# ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಸ್ಯ ಆರೋಗ್ಯ ಕೇಂದ್ರ (Plant Health clinic) ಸಹಾಯಧನ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಗಳು:

ಪೀಡೆ ಸೋಂಕಿದ ಬೆಳೆಗಳಲ್ಲಿ ರೋಗಗಳನ್ನು ವಿಶ್ಲೇಷಣೆ ಮಾಡುವುದರ ಮೂಲಕ ರೈತರಿಗೆ ಸರಿಯಾದ ನಿಯಂತ್ರಣಾ ಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡುವ ಉದ್ದೇಶವನ್ನು ಹೊಂದಿರುವ ಸಸ್ಯ ಅರೋಗ್ಯ ಚಿಕಿತ್ಸಾಲಯವನ್ನು ಸ್ಥಾಪಿಸುವ ಫಲಾನುಭವಿಗಳಿಗೆ ಸಹಾಯಧನವನ್ನು ನೀಡಲಾಗುತ್ತದೆ.

ಈ ಘಟಕದ ಅನುದಾನವನ್ನು ಸರ್ಕಾರ/ ಸರ್ಕಾರೇತರ ಸಂಘ ಸಂಸ್ಥೆಗಳು / ಖಾಸಗಿಯವರಿಗೆ ಸಸ್ಯ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಮೂಲ ಸೌಕರ್ಯವನ್ನು ನಿರ್ಮಿಸಿಕೊಳ್ಳಲು ಉಪಯೋಗಿಸಬಹುದು.

ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ಶೇ 100 ರಷ್ಟು ಅಂದರೆ, ರೂ 25.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ ಹಾಗೂ ಖಾಸಗಿ ವಲಯದ ಸಂಸ್ಥೆಗಳಿಗೆ ಶೇ 50 ರಷ್ಟು ಅಂದರೆ, ರೂ 12.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.

**ಸಸ್ಯ ಆರೋಗ್ಯ ಕೇಂದ್ರ ಘಟಕದ ಅಂದಾಜು ವೆಚ್ಚದ ವಿವರ:**

**(ರೂ. ಲಕ್ಷಗಳಲ್ಲಿ)**

| Sl. No | Components | Estimated Cost |
|---|---|---|
| 1 | Building – Construction/Renovation for plant health clinic | 4.00 |
| 2 | **Equipments** | |
| | BOD Incubator, ELISA Reader Testing Kit, Shaker, Sterio Zoom Microscope, pH Meter, Seed Tester, Centrifuge, Water Purification units, Microwave Oven, Refrigerator, | 20.00 |
| 3 | Contingency (Computer, Lab tools and Storage Almirahs/Racks for Culture & Records) | 1.00 |
| | **Total** | **25.00** |

**ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ವಿವಿರ:**

- ಸಸ್ಯ ಆರೋಗ್ಯ ಕೇಂದ್ರ ನಿರ್ಮಿಸಲು ಉದ್ದೇಶಿಸುವ ಫಲಾನುಭವಿಯ ಹೆಸರಿನಲ್ಲಿ ಜಮೀನು ಹೊಂದಿರಬೇಕು.ಸದರಿ ಜಮೀನು ಕೃಷಿಯೇತರ ಪ್ರಯೋಗಕ್ಕಾಗಿ ಪರಿರ್ವತನೆಯಾಗಿರಬೇಕು. ಸಸ್ಯ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ (NOC) ಪಡೆದುಕೊಳ್ಳುವುದು.
- ಸಸ್ಯ ಆರೋಗ್ಯ ಕೇಂದ್ರುದ ನಿರ್ಮಾಣಕ್ಕೆ ರಾಷ್ಟ್ರೀಕೃತ ಬ್ಯಾಂಕ್ ನಿಂದ ಸಾಲ ಪಡೆದಿರುವ ಸಾಲ ಮಂಜೂರಾತಿ ಪತ್ರ ಹಾಗೂ appraisal letter ನೀಡುವುದು.
- ಖಾಸಗಿ ವಲಯದಲ್ಲಿ ಸಸ್ಯ ಆರೋಗ್ಯ ಕೇಂದ್ರುದವನ್ನು ಸ್ಥಾಪಿಸಲು ಆಸಕ್ತಿ ಉಳ್ಳವರು ಈ ವಿಭಾಗದಲ್ಲಿ ಪರಿಣತಿ ಹೊಂದಿರಬೇಕು ಅಥವಾ ಪರಿಣತಿ ಹೊಂದಿರುವ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದು. ನೇಮಕ ಮಾಡಿಕೊಳ್ಳುವ ಸಿಬ್ಬಂದಿಯ ವಿಧ್ಯಾರ್ಹತೆ ಹಾಗೂ ಅನುಭವದ ವಿವರ ನೀಡುವುದು.
- ಸಸ್ಯ ಆರೋಗ್ಯ ಕೇಂದ್ರುದ ಕಟ್ಟಡದ ಅಂದಾಜು ವೆಚ್ಚ ಹಾಗೂ ನಕ್ಷೆಯನ್ನು ನೊಂದಾಯಿತ ಇಂಜಿನಿಯರ್ ಅಥವಾ Architect ಅಥವಾ ಸರ್ಕಾರದ ಯಾವುದೇ ಇಲಾಖೆಯ ಇಂಜಿನಿಯರ್ ರವರಿಂದ ಧೃಡೀಕರಿಸುವುದು ಕಡ್ಡಾಯ.
- ಸಸ್ಯ ಆರೋಗ್ಯ ಕೇಂದ್ರುದವನ್ನು ಸದರಿ ಜಾಗದಲ್ಲಿ ನಿರ್ಮಿಸುತ್ತಿರುವುದ್ದರಿಂದ ಆಗುವ ಸಾಮಾಜಿಕ ಪ್ರಯೋಜನಗಳು.
- ಪ್ರಯೋಗಾಲಯವನ್ನು ನಿರ್ಮಿಸುವುದ್ದರಿಂದ ಸುತ್ತಲಿನ ಯಾವ ಪ್ರದೇಶಗಳಿಗೆ ಯಾವ ರೀತಿ ಅನುಕೂಲವಾಗುತ್ತದೆ ಎಂಬ ವಿವರ.
- ಸದರಿ ಘಟಕದಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಯ ವಿಧ್ಯಾಹತೆಯ ವಿವರ.
- ಸದರಿ ಕೇಂದ್ರುದಲ್ಲಿ ಪ್ರತಿ ಮಾದರಿ (Sample) ವಿಶ್ಲೇಷಣೆಯನ್ನು ರೈತರಿಗೆ ಯಾವ ದರದಲ್ಲಿ ಮಾಡಿಕೊಡಲಾಗುತ್ತದೆ ಎಂಬ ವಿವರ.
- ಸದರಿ ಪ್ರಯೋಗಾಲಯದ ಆರ್ಥಿಕ ಸುಸ್ಥಿರತೆ/ ಆದಾಯವನ್ನು ಕಾಪಾಡಿಕೊಳ್ಳಲು ನಿಗಧಿಪಡಿಸಿಕೊಂಡಿರುವ ಮಾನದಂಡಗಳು.
- ಸದರಿ ಪ್ರಯೋಗಾಲಯದ ವಿವಧ ಕಟ್ಟಡದ ಕಾಮಾಗಾರಿ ಹಾಗೂ ಉಪಕರಣಗಳ ಖರೀದಿಯ ಅನುಷ್ಠಾನ ವೇಳಾ ಪಟ್ಟಿ ನೀಡುವುದು.

- ಸದರಿ ಘಟಕಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಇತರೇ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದನ್ನು ರೂ .100 ಛಾಪಾ ಕಾಗದದಲ್ಲಿ ಬರೆದುಕೊಟ್ಟ ಮುಚ್ಚಳಿಕೆ ಪತ್ರ ನೀಡುವುದು.
- ಸಸ್ಯ ಆರೋಗ್ಯ ಕೇಂದ್ರದ ಪ್ರಸ್ತಾವನೆಯಲ್ಲಿ ತಿಳಿಸುವ ಉಪಕರಣಗಳ ಬಿಲ್ಲು / ಕೋಟೆಷನ್ ನೀಡುವುದು.
- SWOT Analysis
- Backward and Forward linkage
- Economic feasibility of the Project(IRR, NPW, Break even point, DSER,DER, Benefit Cost Ratio, Profitability Statement)
- Investment Certificate from Charted Acountant.

**ಸಹಾಯಧನ ವಿತರಣೆ:**

- ಸಸ್ಯ ಆರೋಗ್ಯ ಕೇಂದ್ರದ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಹಾಗೂ ಪ್ರಸ್ತಾವನೆಯಲ್ಲಿ ನೀಡಿರುವ ಎಲ್ಲಾ ಉಪಕರಣಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯು ಸ್ಥಳ ಪರಿಶೀಲನೆ ಮಾಡಿ ಖಚಿತ ಪಡಿಸಿಕೊಂಡ ನಂತರವೇ ಅಂತಿಮ ವಾಗಿ ಸಹಾಯಧನವನ್ನು ಬಿಡುಗಡೆ ಮಾಡುವುದು.
- ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲೋಗೋ (Logo) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಸಸ್ಯ ಆರೋಗ್ಯ ಕೇಂದ್ರದ ಮುಂಬಾಗದಲ್ಲಿ ಪ್ರದರ್ಶಿಸಬೇಕು.
- ಈ ಕಾರ್ಯಕ್ರಮವು Credit linked back ended subsidy ಯಾಗಿದ್ದು, ಸಹಾಯಧನದ ಮೊತ್ತವನ್ನು ಮಾರ್ಗಸೂಚಿಯ ಪ್ರಕಾರ ಬ್ಯಾಂಕ್ ಸಾಲದ ಖಾತೆಗೆ ಜಮಾ ಮಾಡುವುದು.

**ಆರ್ಥಿಕ ಪ್ರತ್ಯಾ ಯೋಜನೆ (Delegation of power):**

- NHM ಯೋಜನೆಯ ಮಾರ್ಗಸೂಚಿಯಂತೆ ರೂ. 25.00 ಲಕ್ಷಗಳವರೆಗೆ ತೋಟಗಾರಿಕೆ ಮಿಷನ್ ನಿರ್ದೇಶಕರಿಗೆ ಅವಕಾಶ ಇರುತ್ತದೆ. ಅದರಿಂದ ಜಿಲ್ಲಾಮಟ್ಟದಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮಂಜೂರಾತಿಗಾಗಿ ಕಳುಹಿಸುವುದು.
- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನೆಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ KSHMA ಮತ್ತು ತೋಟಗಾರಿಕೆ ಉಪ ನಿರ್ದೇಶಕರವರಿಗೆ ಸಲ್ಲಿಸುವುದು.

**ಮಿಷನ್ ನಿರ್ದೇಶಕರು**

**ಹಾಗೂ**

**ತೋಟಗಾರಿಕೆ ನಿರ್ದೇಶಕರು**

## Check List

| | |
|---|---|
| 1. | Name of the Project |
| 2. | Name and Address of the Organization |
| 3. | Name and address with telephone no. of the key person in-charge of the project |
| 4. | Co-Principal Investigators |
| 5. | Brief back ground of the project |
| 6. | Objectives |
| 7. | Location of the Project and availability of building for the purpose |
| 8. | Justification for creating a facility in the area. |
| 9. | Cost of the project |
| 10. | Means of finance |
| 11. | Area of operation with special reference to NHM Districts. |
| 12. | Number of Farmers to be benefited. |
| 13 | Economics of project along with, profitability and cost at which services will be made available to farmers. |
| 14 | Certificate Stating the subsidy has not been received from any other source. |
| 15 | Social Benefits. |
| 16. | Commitment of the organization for deployment of experts and staff to the project for continuity and accountability |
| 17 | Details of the sustainability of the project with special reference to its capacity to generate income, as only one time grant is available. |
| 18 | Implementation Schedule |
| 19 | Cost Benefit Ratio |
| 20 | Bank Loan & Appraisal letter |
| 21 | Building Plan & estimate |
| 23 | Subsidy Recommended by DDH |